ಮೈಸೂರ ಗೆಜೆಟ್

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 27, ಸ್ರ್ 1887.

ಈ ಭಾಗವನ್ನು ಪ್ರತ್ಯೇಕ ಕೀರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್ಗಿರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಮೈಸೂರು ದೇಶದ ರೆಸಿಡೆಂಟರವರಿಂದ ಕೊಡೋಣಾದ ಇಸ್ತಿಹಾರ್ನಾಮೆ.

ನಂ. 2626--2357. ತಾರೀಖು 17ನೇ ಆಗಸ್ಟು 1887.

ಮೈಸೂರು ದೇಶದ ಆಫಿಷಿಯೇಟಿಂಗ್ ರೆಸಿಡೆಂಟರವರು ಅಪ್ಪಣೇ ಕೊಡುವದೇನಂದರೆ, ಇದರಡೀ ಕಂಡ ನಿಬಂಧನೆಯು, ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿಗೆ ಮ್ಯುನಿಸಿಪೆಲ್ ಕಮ್ಮಿಷನರುಗಳನ್ನ ಚುನಾಯಿಸುವ ಬಗ್ಗೆ ಏರ್ಪಾಟಾದ 1884ನೇ ಇಸವಿ ಜನವರೀ 30ನೇ ಮತ್ತು 24ನೇ ನಂಬರ್ ಇಸ್ತಿಹಾರ್ನಾಮೆಯೊಡನೆ ಪಾಯಿಷ್ ಮಾಡಲ್ಪಟ್ಟ ನಿಬಂಧನೆಯ 7ನೇ ರೂಲಿಗೆ ಬದಲಾಗಿ ಕೀರಿಸಲ್ಪಡತಕ್ಕದ್ದು.

7. ಯರಡನೇ ರೂಲ್‌ನಲ್ಲಿ ನಮೂದಾದ ಆಯಾ ತರಗತಿಯವರ ಪ್ರತಿನಿಧಿ ಬಗ್ಗೆ ಮ್ಯುನಿಸಿಪೆಲ್ ಕಮ್ಮಿಷನರುಗಳ ವಂದು ಒಟ್ಟು ಚುನಾವಣೆಯು, ಯರಡು ವರುಷಗಳಿಗೆ ವಂದಾವರ್ತಿ ಆಯಾ ತರಗತಿಗೋಸ್ಕರ ಇದರಡೀ ಗೊತ್ತು ಮಾಡಲ್ಪಟ್ಟಿರುವ ತಾರೀಖುಗಳಲ್ಲಿ ನಡಿಸಲ್ಪಡತಕ್ಕದ್ದು:—

I.	ಯೂರೋಪಿಯರ್ಸ್ ವ ಯುರೇಜಿಯರ್ಸರು	..	1ನೇ ಆಗಸ್ಟು.
II.	ಮಹಮ್ಮದಿಯರ್ಸರು	.. ..	8ನೇ ಡಿಟೋ
III.	ಹಿಂದೂ ವ ಯಿತರರು	.. ..	15ನೇ ಡಿಟೋ

ಅಥವಾ ಸದರೀ ತಾರೀಖುಗಳು ಆದಿವಾರ ಯಾ ಮಂಜೂರಾದ ಸರ್ಕಾರದ ರಜಾ ದಿವಸಗಳಾಗುವ ಪಕ್ಷಕ್ಕೆ ಅವುಗಳ ಮಾರನೇ ದಿವಸದಲ್ಲಿ ನಡಿಸಲ್ಪಡತಕ್ಕದ್ದು. ಮ್ಯುನಿಸಿಪೆಲ್ ಕಮ್ಮಿಷನ್ನಿನ ಪ್ರೆಸಿಡೆಂಟರು ಮೇಲೆ ನಮೂದ್ ಮಾಡಲ್ಪಟ್ಟ ತಾರೀಖುಗಳಲ್ಲಿ, ಸಂಬಂಧಪಟ್ಟ ಆಯಾ ತರಗತಿಯ ಚುನಾವಣೀದಾರರ ವಂದು ಸಮಾಜವನ್ನು ಕೀರಿಸತಕ್ಕದ್ದು, ಮತ್ತು ಆ ಬಗ್ಗಾಗಿ ಕನಿಷ್ಟ ಪಕ್ಷ ಯೇಳು ದಿವಸಗಳಿಗೆ ಮುಂಚಿತವಾಗಿ ನೋಟೀಸ್ ಕೊಡಲ್ಪಡತಕ್ಕದ್ದಲ್ಲವೇ ಅಂಥಾ ಸಮಾಜದಲ್ಲಿ ಚುನಾವಣೀ ಬಗ್ಗಾಗಿ ಇಸಂಗಳು ಸೂಚಿಸಲ್ಪಟ್ಟು ಅನುಮೋದಿಸಲ್ಪಡತಕ್ಕದ್ದು. ಇಸಂಗಳ ಸಂಖೆಯು, ಪ್ರತಿ ತರಗತಿಗೆ ಗೊತ್ತು ಮಾಡಲ್ಪಟ್ಟ ಕಮ್ಮಿಷನರುಗಳ ಸಂಖೆಗೆ ಜಾಸ್ತಿಯಾಗದಿದ್ದ ಪಕ್ಷಕ್ಕೆ ಅಂಥಾ ಇಸಂಗಳು ಕ್ರಮವಾಗಿ ಚುನಾಯಿಸಲ್ಪಟ್ಟಂತೆ ತಿಳಿಸಲ್ಪಡತಕ್ಕದ್ದು. ಪರಂತು ಇಸಂಗಳ ಸಂಖೆಯು, ಅಂಥಾ ತರಗತೀ ಜನಗಳ ತರಫಿನ ಕಮ್ಮಿಷನರುಗಳ ಸಂಖೆಗೆ ಜಾಸ್ತಿಯಾದರೆ ಚುನಾವಣೆಯು, ಅಭಿಪ್ರಾಯ ಮೂಲಕ ಗೊತ್ತು ಮಾಡಲ್ಪಡತಕ್ಕದ್ದು.

ಅಭಿಪ್ರಾಯ ಮೂಲಕವಾದ ಚುನಾವಣೆಯು, ಆ ಕಾಲದಲ್ಲಿ ಮ್ಯುನಿಸಿಪಲ್ ಕಮ್ಮಿಷನಿನ ಸ್ರಿಡೆಂಟರವರಿಂದ ಗೊತ್ತು ಮಾಡಲ್ಪಡುವಂಥಾ ವಂದು ದಿವಸದಲ್ಲಿ ನಡಿಸಲ್ಪಡತಕ್ಕದ್ದು, ಪರಂತು ಹಾಂಗೆ ಗೊತ್ತುಮಾಡಲ್ಪಡುವ ದಿವಸವು ಸಮಾಜ ಕೇರಿದ ತಾರೀಖು ಮೊದಲು ಮೂರು ದಿವಸದ ತರುವಾಯಯಿರತಕ್ಕದ್ದು.

ಹುಕ್ಕುಂ ಬಮೋಜೀಬ್,
ಯಲ್. ಜಬ್ಳಿಯು. ಕಿಂಗ್,
ರೆಸಿಡೆಂಟರ ಅಸಿಸ್ಟೆಂಟ್.

1887ನೇ ಇಸವಿಯ ಮೈಸೂರು ಪ್ಲೀಡರ್‌ಗಳ ಪರೀಕ್ಷೆಗಳು.

ಬೆಂಗಳೂರು—ಸ್ರ 1887ನೇ ಇಸವಿ ಆಗಸ್ಟ್ ತಾರೀಖು 24ರಲ್ಲು.

ಮೈಸೂರು ಸೀಮೆಯ 1ನೇ ಗ್ರೇಡ್ ಪ್ಲೀಡರುಗಳ ಪರೀಕ್ಷೆಯಲ್ಲಿ, ಈ ಕೆಳಗೆ ನಮೂದಾಗಿರುವವರು ತೇರ್ಗಡೆಯಾಗಿರುತ್ತಾರೆ.

ಪರೀಕ್ಷೆಯಾನು ಸಾರವಾದ ನಂಬರು.	ರಿಜಿಸ್ಟರ್ ನಂಬರ್.	ಹೆಸರು.	ಕಸಬು ಮುಂತಾದ ವಿವರ.	ಯಾವ ಭಾಷೆಯಲ್ಲಿ ಪರೀಕ್ಷೆಕೊಟ್ಟದ್ದು.
1	25	ಎಂ. ವೆಂಕಟರಾಮಯ್ಯ ..	2ನೇ ಗ್ರೇಡ್ ಪ್ಲೀಡರ್—ಮೈಸೂರು	ಇಂಗ್ಲೀಷ್
2	27	ಎಂ. ಎಲ್. ನರಸಿಂಹ್ಮಯ್ಯಂಗಾರ್ ..	,, ಸದರೀ—ಹಾಸನ	ಸದರೀ
3	24	ಎಸ್. ಗರುಡಾಚಾರ್ ..	,,	ಸದರೀ
4	11	ಬಿ. ಮೈಲಾರಯ್ಯ ..	2ನೇ ಗ್ರೇಡ್ ಪ್ಲೀಡರ್—ಶ್ರೀರಂಗಪಟ್ಟಣ	ಕನ್ನಡ
5	16	ಎ. ಕೃಷ್ಣರಾವ್ ..	,,	ಇಂಗ್ಲೀಷ

2. 2ನೇ ಗ್ರೇಡ್ ಪ್ಲೀಡರ್ ಪರೀಕ್ಷೆಗೆ ಬಂದವರ ಪೈಕೀ ಈ ಕೆಳಗೆ ನಮೂದಿರುವರು, ಸ್ರ 1885ನೇ ಇಸವಿ ಮೇ ತಾರೀಖು 27ರಲ್ಲು ದಿವಾನ್ ಸಾಹೇಬರವರು ಕೊಟ್ಟಿರುವ ಕ್ಯಾಂಪ್ ನಂಬರು 274ನೇ ಇಸ್ತಿಹಾರ್‌ನಾಮೆಯ ಪ್ರಕಾರ 1ನೇ ಗ್ರೇಡ್ ಪ್ಲೀಡರ್ ಪರೀಕ್ಷೆಗೆ ನಿಯಾಮಕವಾದ ರುಸುಮಿನ ಭರ್ತೀ ಬ್ಯೆ ಬೇಕಾಗುವಷ್ಟು ಜಾಸ್ತೀ ರುಸುಮನ್ನ ಕೊಟ್ಟರೆ, ಸದರೀ 1ನೇ ಗ್ರೇಡ್ ಪ್ಲೀಡರುಗಳಾಗಿ ಸೇರುವ ಬ್ಯೆ ಅರ್ಹತೆಯನ್ನು ಹೊಂದಿರುತ್ತಾರೆ.

ಪರೀಕ್ಷೆಯಾನು ಸಾರವಾದ ನಂಬರು.	ರಿಜಿಸ್ಟರ್ ನಂಬರ್.	ಹೆಸರು.	ಕಸಬು ಮುಂತಾದ ವಿವರ.	ಯಾವ ಭಾಷೆಯಲ್ಲಿ ಪರೀಕ್ಷೆಕೊಟ್ಟದ್ದು.
1	4	ಮೈಸೂರು ಸುಬ್ಬರಾವ್ ..	,,	ಇಂಗ್ಲೀಷ್
2	23	ಎಂ. ಶ್ರೀಕಂಠಯ್ಯ ..	,,	ಸದರೀ
3	29	ಬಿ. ಕೆ. ಶ್ರೀನಿವಾಸರಾವ್ ..	ಕವೆಮೊಗ್ಗೆಯಲ್ಲಿ—ಗುಮಾಸ್ತೆ	ಸದರೀ